ಸಭಾಧ್ಯಕ್ಷರು.—ಅದನ್ನು ನೋಡಿಸುತ್ತೇವೆಂದು ಹೇಳಿದ್ದಾರೆ ಬಿಡಿ.

ಶ್ರೀ ಪ್ರಭಾಕರ್ ಎಸ್. ರಾಣೆ.—ನನ್ನ ಇನ್ನೊಂದು ಪ್ರಶ್ನೆ ಏನೆಂದರೆ.....

MR. SPEAKER.—You have to elicit information from the Minister. You are supplying him with the information. There are other ways where an MLA, an Hon'ble Member of this House can get these things rectified.

ಶ್ರೀ ಪ್ರಭಾಕರ್ ಎಸ್. ರಾಣೆ.—ಶಿಕ್ಷಣ ಇಲಾಖೆಯನ್ನು ಜಿಲ್ಲಾ ಪರಿಷತ್ತಿನಿಂದ ಬೇರ್ಪಡಿಸಲು ಕ್ರಮ ಕೈಗೊಳ್ಳುತ್ತೀರಾ ?

ಶ್ರೀ ಕೆ. ಹೆಚ್. ರಂಗನಾಥ್.—ಇದರ ಬಗ್ಗೆ ವ್ಯಾಪಕವಾಗಿ ಚರ್ಚೆಯಾಗುತ್ತಿದೆ. ಶಿಕ್ಷಣ ಇಲಾಖೆಯ ಸಂಘ ಸಂಸ್ಥೆಗಳವರು ಇದನ್ನು ಪ್ರಸ್ತಾಪ ಮಾಡಿದ್ದಾರೆ. ಸಾರ್ವಜನಿಕರೂ ಸಹ ಇದನ್ನು ಪ್ರಸ್ತಾಪ ಮಾಡಿದ್ದಾರೆ. ಈ ಮಧ್ಯೆ ನಾನು ನಿನ್ನೆ ಪತ್ರಿಕೆಯಲ್ಲಿ ಬಂದಿರುವುದನ್ನು ನೋಡಿದೆ, ನಮ್ಮ ಅಧಿಕಾರದಲ್ಲಿ ಹಸ್ತಕ್ಷೇಪ ಮಾಡುತ್ತಿದ್ದಾರೆಂದು ಜಿಲ್ಲಾ ಪರಿಷತ್ತಿನ ಅಧ್ಯಕ್ಷರು ಬೇರೆ ಪ್ರಸ್ತಾಪ ಮಾಡಿದ್ದಾರೆ. ಈ ಗೊಂದಲದಲ್ಲಿ ನಾವು ಸಿಕ್ಕಿಹಾಕಿಕೊಂಡಿದ್ದೇವೆ. ಅಧಿಕಾರ ಕೊಡುವಾಗ ಅವಸರದಲ್ಲಿ ಎಲ್ಲಿ ಕೊಟ್ಟಿದ್ದಾರೆ. ನನ್ನ ಅಧಿಕಾರಿಗಳಿಗೂ ಕೂಡ ಒಂದು ತೊಂದರೆಯಾಗಿದೆ. ೧೯೭೮ ರಲ್ಲಿ ಯಾವ್ಯಾವ ಅಧಿಕಾರಿಗೆ ಏನೇನು ಅಧಿಕಾರ ಇತ್ತೆಂಬುದನ್ನು ಕಾನೂನಿನಲ್ಲಿ ಹೇಳಿದ್ದೇವೆ, ಡೆಪ್ಯೂಟಿ ಡೈರೆಕ್ಟರಿಗೆ ಏನೂ ಅಧಿಕಾರ ಇದೆ, ಅವನ ವ್ಯಾಪ್ತಿ ಏನು ಅವನ ಏನು ಕೆಲಸ ಮಾಡಬಹುದು, ಎಜ್ಯುಕೇಷನ್ ಆಫೀಸರ್ ಏನು ಕೆಲಸ ಮಾಡಬೇಕು, ಅಸಿಸ್ಟೆಂಟ್ ಎಜುಕೇಷನ್ ಆಫೀಸರ್ ಏನು ಕೆಲಸ ಮಾಡಬೇಕು, ಹಾಗೆಯೇ ಜಾಯಿಂಟ್ ಡೈರೆಕ್ಟರ್ ಅವರು ಏನೂ ಕೆಲಸ ಮಾಡಬೇಕು ಎಂಬುದನ್ನೆಲ್ಲಾ ತಿಳಿಸಲಾಗಿತ್ತು. ಈ ಎಲ್ಲ ಅಧಿಕಾರವೂ ಈಗ ಹಾಗೆಯೇ ಇದೆ. ಆದರೆ ಈಗ ಮಾನ್ಯ ಸದಸ್ಯರು ಜಿಲ್ಲಾಪರಿಷತ್ತಿನವರು ಸರಿಯಾಗಿ ಕೆಲಸ ಮಾಡುತ್ತಿಲ್ಲ, ವರ್ಗ ಮಾಡಿ ಎಂದರೆ ''ನೀವು ಯಾರು'' ಎಂದು ಕೇಳುತ್ತಾರೆಂದು ಹೇಳುತ್ತಿದ್ದಾರೆ. ಈ ಗೊಂದಲ ಇದೆ. ಹೀಗೆ ನಾವು ತೂಬಕಿನಲ್ಲಿ ಸಿಕ್ಕಿಹಾಕಿಕೊಂಡಿದ್ದೇವೆ. ಮಾನ್ಯ ಸದಸ್ಯರ ಅಭಿಪ್ರಾಯ ಇದನ್ನು ಬೇರೆ ಮಾಡಬೇಕು ಎಂದಿದ್ದರೆ, ಅದು ಸರ್ಕಾರ ತೀರ್ಮಾನ ತೆಗೆದುಕೊಳ್ಳತಕ್ಕ ವಿಚಾರವಾಗಿದೆ. ಅಲ್ಲಿಗೆ ನಾನು ಅದನ್ನು ಬಿಡುತ್ತೇನೆ. ಬಹುಮಟ್ಟಿಗೆ ಕೆಲಸ ಸರಿಯಾಗಿ ಆಗುತ್ತಿಲ್ಲವೆಂಬ ಅಭಿಪ್ರಾಯ ಈ ಸದನದ ಸದಸ್ಯರಿಗೆ ಮತ್ತು ಸರ್ಕಾರದ ಗಮನಕ್ಕೆ ಬರುವುದಾದರೆ ಮುಂದಿನಕಾರ್ಯಕ್ರಮವನ್ನು ಸರ್ಕಾರ ತೆಗೆದುಕೊಳ್ಳಬೇಕಾಗುತ್ತದೆ.

ಪದವಿಪೂರ್ವ ಪರೀಕ್ಷೆಗಳ ಉತ್ತರ ಪತ್ರಿಕೆಗಳ ಮರು ಮೌಲ್ಯ ಮಾಪನದ ಬಗ್ಗೆ

೪೮೭ (೧೩೬೩) ಶ್ರೀ ಪೆರಿಕಲ್ ಮಲ್ಲಪ್ಪ (ಚಿಕ್ಕಮೇಟಿ).—ಮಾನ್ಯ ಶಿಕ್ಷಣ, ಯುವಜನ ಸೇವೆ, ಕ್ರೀಡೆ, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಅ) ದ್ವಿತೀಯ ಪಿ.ಯು.ಸಿ. ರಿಪೇಕ್ಷೆಯಂ ಉತ್ತರ ಪತ್ರಿಕೆಗಳನ್ನು ಪುನರ್ ಮೌಲ್ಯಮಾಪನ ಮಾಡಿಸಲು ಅವಕಾಶವಿದೆಯೇ ?

ಆ) ಇಲ್ಲದಿದ್ದಲ್ಲಿ, ಸರ್ಕಾರ ಪುನರ್ ಮೌಲ್ಯಮಾಪನಕ್ಕೆ ಕ್ರಮ ಕೈಗೊಂಡು ವಿದ್ಯಾರ್ಥಿಗಳಿಗೆ ನ್ಯಾಯ ದೊರಕಿಸುವುದೇ ?

ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ ಯುವಜನ ಸೇವೆ, ಕ್ರೀಡೆ, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಪೆರಿಕಲ್ ಮಲ್ಲಪ್ಪ.—ಪಿ.ಯು.ಸಿ. ಬೋರ್ಡ್‌ನವರು ದ್ವಿತೀಯ ಪಿ.ಯು.ಸಿ. ಪರೀಕ್ಷೆಗಳನ್ನು ನಡೆಸುತ್ತಾರೆ. ಆದರೆ ಈ ಪರೀಕ್ಷೆಗಳ ಉತ್ತರ ಪತ್ರಿಕೆಗಳನ್ನು ರೀವ್ಯಾಲ್ಯುವೇಷನ್ ಮಾಡಲು

ಸೌಲಭ್ಯ ಮಾಡಿಕೊಟ್ಟಿಲ್ಲ, ಈಗ ಕೇವಲ ರೀಟೊ ಟಲಿಂಗ್ ಮಾಡುತ್ತಿದ್ದಾರೆ, ಆದೇ ಡಿಗ್ರಿ ತರಗತಿಗಳಲ್ಲಿ ರೀವ್ಯಾಲ್ಯುವೇಷನ್ ಮಾಡಿಸುವ ಸೌಲಭ್ಯ ಇದೆ. ಸುಮಾರು ಎರಡು ಲಕ್ಷ ವಿದ್ಯಾರ್ಥಿಗಳು ಎರಡನೇಯ ಪಿ.ಯು.ಸಿ.ಗೆ ಕುಳಿತುಕೊಳ್ಳುತ್ತಾರೆ. ಈ ಪರೀಕ್ಷೆಗಳಲ್ಲಿ ಬಹಳ ಅವ್ಯವಹಾರಗಳು ನಡೆಯುತ್ತಿವೆ, ಏಕೆಂದರೆ ಕಂಪ್ಯೂಟರ್‌ನಲ್ಲಿ ಫೀಡ್ ಮಾಡುವಾಗ ಅವ್ಯವಹಾರಗಳು ಆಗಬಹುದು, ಶೇಕಡ ೪೦ ಅಂಕಗಳು ಇದ್ದದ್ದು ೯೦ ಪರ್ಸೆಂಟ್ ಆಗಬಹುದು ಹಾಗೆಯೇ ೯೦ ಪರ್ಸೆಂಟ್ ೪೦ ಪರ್ಸೆಂಟ್ ಆಗಬಹುದು. ಈ ತರಹ ಬಹಳ ಅವ್ಯವಹಾರಗಳು ಆಗಿವೆ. ಕೆಲವು ವರ್ಷಗಳ ಹಿಂದೆ ಇದರ ಬಗ್ಗೆ ಕೆಲವು ಹಿರಿಯ ಅಧಿಕಾರಿಗಳ ಮೇಲೆ ಕ್ರಮವನ್ನು ಕೂಡ ಕೈಗೊಂಡಿದ್ದಾರೆ ಡಿಗ್ರಿ ತರಗತಿಯಲ್ಲಿ ರೀವ್ಯಾಲ್ಯೂವೇಷನ್ ಇರುವ ಹಾಗೆ ಎರಡನೇಯ ಪಿ.ಯು.ಸಿಗೂ ರೀವ್ಯಾಲ್ಯೂವೇಷನ್‌ಗೆ ಅವಕಾಶ ಮಾಡಬೇಕು. Because Second Year PUC is the steeping-stone for the career of the Students. ಬಿ.ಇ.ಗೆ ಆಗಲಿ, ಎಂ.ಬಿ.ಬಿ.ಎಸ್.ಗೆ ಆಗಲಿ, ಅಥವಾ ಯಾವುದೇ ಟೆಕ್ನಿಕಲ್ ಕೋರ್ಸ್‌ಗಳಿಗೆ ಆಗಲಿ, ಹೋಗಬೇಕಾದರೂ ಎರಡನೆಯ ಪಿ.ಯು.ಸಿ. ಅಂಕಗಳೇ ಆಧಾರ. ಸನ್ಮಾನ್ಯ ಸಚಿವರು ಇದನ್ನು ಮಾಡಲು ಆಗುವುಲ್ಲವೆಂದು ಹೇಳಿದ್ದಾರೆ. ಇದು ಸರಿಯಲ್ಲ, ದಯವಿಟ್ಟು ಎರಡನೆಯ ಪಿಯುಸಿ ವಿದ್ಯಾರ್ಥಿಗಳಿಗೂ ಕೂಡ ರೀವ್ಯಾಲ್ಯುವೇಶನ್‌ಗೆ ಅಲೋ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್.—ಇದನ್ನು ಮಾಡಿದರೆ ಅವ್ಯವಹಾರಗಳು ನಿಂತು ಹೋಗುತ್ತದೆಂದು ನಾನು ಒಪ್ಪಲು ತಯಾರಿಲ್ಲ, ಮತ್ತೆ ಅವ್ಯವಹಾರ ಪ್ರಾರಂಭವಾದರೂ ಆಗಬಹುದು, ಅವ್ಯವಹಾರ ನಿಲ್ಲುವುದಕ್ಕೆ ಹೋಗಿ ರೀವ್ಯಾಲ್ಯುವೇಷನ್ ವ್ಯವಹಾರ ಪ್ರಾರಂಭವಾದರೂ ಆಗಬಹುದು. ಅದು ನಿಲ್ಲುತ್ತದೆಂದು ಹೇಳುವುದಕ್ಕಾಗುವುದಿಲ್ಲ ನಾನು ಹೇಳಿದಂತೆ ಇಲ್ಲಿನ ಸಂಖ್ಯೆ ದೊಡ್ಡದು. ಸುಮಾರು ೨ ಲಕ್ಷ ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತುಕೊಳ್ಳುತ್ತಾರೆ. ಆದೇ ಡಿಗ್ರಿ ಪರೀಕ್ಷೆಗಳಲ್ಲಿ ಸಂಖ್ಯೆ ಕಡಿಮೆ ಇರುವುದರಿಂದ ಈ ಸೌಲಭ್ಯವನ್ನು ಕೊಟ್ಟಿರಬಹುದು. ಇಲ್ಲಿ ಸಂಖ್ಯೆಯನ್ನು ನೋಡಿದರೆ ಹಾಗೆ ಮಾಡತಕ್ಕಂಥಾದ್ದು ಕಷ್ಟ ಇದೆ ಎನ್ನುವ ದೃಷ್ಟಿಯಿಂದ ಇಲ್ಲ ಎಂದು ಹೇಳಿದ್ದೇನೆ. ಇದೇ ನಮ್ಮ ಕೊನೆಯ ತೀರ್ಮಾನ ಎಂದು ತಾವುಗಳು ಭಾವಿಸಬಾರದು. ಆದರ ಸಾಧ್ಯಾಸಾಧ್ಯತೆಗಳನ್ನು ಪರಿಶೀಲನೆ ಮಾಡಿಸೋಣ, ಸರಕಾರದ ಉದ್ದೇಶವೂ ಕೂಡ ಮಕ್ಕಳಿಗೆ ಮತ್ತು ತಂದೆತಾಯಿಗಳಿಗೆ ತೊಂದರೆಯಾಗಬಾರದು ಎನ್ನುವುದಾಗಿದೆ. ಆದರೆ ಆಪಾದನೆಗಳು ಆಗಾಗ ಏನು ಕೇಳಿ ಬರುತ್ತಿವೆ, ಅದರ ಬಗ್ಗೆ ಗಮನ ಕೊಡಬೇಕಾಗುತ್ತವೆ. ಒಂದು ವೇಳೆ ನಿರ್ದಿಷ್ಟವಾದ ಲೋಪದೋಷಗಳನ್ನು ಸರಕಾರದ ಗಮನಕ್ಕೆ ತಂದರೆ ಆ ಬಗ್ಗೆ ಪರಿಶೀಲನೆ ಮಾಡಿಸುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ.—ನಮ್ಮ ರಾಜ್ಯದಲ್ಲಿರುವ ೪ ಕೋಟಿ ಜನಸಂಖ್ಯೆಯಲ್ಲಿ ಎರಡು ಲಕ್ಷ ವಿದ್ಯಾರ್ಥಿಗಳು ಪಿಯುಸಿ ಪರೀಕ್ಷೆಗೆ ಕುಳಿತುಕೊಳ್ಳುತ್ತಾರೆ. ಇದೇನೂ ಬಹಳ ದೊಡ್ಡ ಸಂಖ್ಯೆಯಲ್ಲಿ ಎಂದು ಹೇಳಬೇಕಾಗುತ್ತದೆ. ಹೀಗೆ ಪರೀಕ್ಷೆ ಕಟ್ಟಿದ ಮೇಲೆ ಏನೋ ಮಿಸ್ಟೇಕ್ ಆಗಬಹುದು ಅದೇ ೭,೮,೯ನೇ ತರಗತಿಗಳಲ್ಲಿ ಮತ್ತು ಎಸ್‌ಎಸ್‌ಎಲ್‌ಸಿಯಲ್ಲಿ ೯೦ ಪರ್‌ಸೆಂಟ್ ಮಾರ್ಕ್ಸ್ ತೆಗೆದುಕೊಂಡವರು ಪಿಯುಸಿಯಲ್ಲಿ ೪೦ ಪರ್‌ಸೆಂಟ್ ಮಾರ್ಕ್ಸ್ ಬಿದ್ದಾಗ ಸಹಜವಾಗಿಯೇ ಗೊಂದಲಕ್ಕೆ ಬಿಳುತ್ತಾರೆ. ಆಗ ಅವರು ತಮ್ಮ ವಿಶ್ವಾಸಾರ್ಹತೆಯ ಮೇಲೆ ರಿವ್ಯಾಲುವೇಶನ್‌ಗೆ ಕೇಳಿದಾಗ ಪರಕಾರದವರು ಇಲ್ಲ ಎಂದರೆ ತುಂಬಾ ಕಷ್ಟಪಡುವಂತಾಗುತ್ತದೆ. ವಿದ್ಯಾರ್ಥಿಗಳ ಸಂಖ್ಯೆ ದೊಡ್ಡದು ಇದ್ದರೆ, ನಮ್ಮ ಸರಕಾರವೂ ದೊಡ್ಡದಾಗಿದೆ, ಇಲಾಖೆಯೂ ದೊಡ್ಡದಾಗಿ ಇದೆ, ಸರಕಾರದ ಬಜೆಟ್ ಕೂಡ ಇದಕ್ಕೆ ದೊಡ್ಡದಾಗಿಯೇ ಇದೆ, ನಮ್ಮಲ್ಲಿ ಕಂಪಲ್ಸರಿ ಎಜುಕೇಶನ್ ಕೂಡ ಇದೆ, ಇಷ್ಟೇ ಅಲ್ಲದೆ ೭೦೦ ಕೋಟಿ ರೂಪಾಯಿಗಳನ್ನು ವಿದ್ಯಾ ಇಲಾಖೆಗೆ ಖರ್ಚು ಮಾಡುತ್ತಿದ್ದೇವೆ. ಇಷ್ಟೆಲ್ಲಾ ಇರುವಾಗ ಪರೀಕ್ಷೆಗೆ ಕುಳಿತಿರುವವರ ಸಂಖ್ಯೆ ದೊಡ್ಡದು ಎಂದು ಕುಳಿತುಬಿಟ್ಟರೆ ವಿದ್ಯಾರ್ಥಿಗಳಿಗೆ ಅನ್ಯಾಯ ಮಾಡಿದಂತಾಗುತ್ತದೆ. ಆದ್ದರಿಂದ ರಿವ್ಯಾಲ್ಯುಷನ್‌ಗೆ ಅವಕಾಶ ಒದಗಿಸಿಕೊಡಬೇಕು. ಹೆಚ್ಚೆಂದರೆ ೨೦೦ ಇಲ್ಲವೇ ೩೦೦ ಇಂತಹ ಕೇಸ್‌ಗಳು ಬರಬಹುದು. ಹೀಗೆ ಒಂದು ಸದವಕಾಶವನ್ನು ಒದಗಿಸಿದರೆ ಅವರಿಗೆ ಯಾರಿಗೆ ಅನ್ಯಾಯವಾಗಿರುತ್ತದೋ ಅಂಥವರಿಗೆ ನ್ಯಾಯ ಸಿಗುತ್ತದೆ ಎಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

(ಉತ್ತರವಿಲ್ಲ)

ಶ್ರೀ ಶಫಿ ಅಹಮದ್.—ಪ್ರಶ್ನೆ ಸಂಖ್ಯೆಳಲಲ (೧೬೩೪) (ಮಾನ್ಯ ಸದಸ್ಯರು ಗೈರು ಹಾಜರಾಗಿದ್ದರು)